ಬಿಸಿಲು ಚುರುಗುಡಲು ಆರಂಭಿಸಿತ್ತು. ತನ್ನ ಜನತಾಮನಿ ಮುಂದೆ ಬಂದು ಕಾಲಿಗೆ ನೀರು ಹಾಕಿಕೊಂಡು ಮನೆ ಹೊಕ್ಕಳು. ಕೆಂಚ ಇನ್ನೂ ಹಾಸಿಗೆಯಲ್ಲೇ ಬಿದ್ದುಕೊಂಡಿದ್ದ. ಹಾಸಿಗೆಯೆಲ್ಲಾ ಅಸ್ತವ್ಯಸ್ತವಾಗಿ ಅವನು ಹೊದ್ದುಕೊಂಡಿದ್ದ ಕೌದಿ, ತೊಟ್ಟುಕೊಂಡಿದ್ದ ಲುಂಗಿಗಳು ದಿಕ್ಕಿಗೊಂದರಂತೆ ಎತ್ತೆತ್ತಲೋ ಬಿದ್ದು ಅವನ ಆರ್ಮೆಜಿ ಚಡ್ಡಿಯೊಳಗಿನಿಂದ ಹೊರಗೆ ಬಂದು ಕುಣಿಯಲು ಹವಣಿಸುತ್ತಿರುವ ಚಿನ್ನಿಕೋಲು ನೋಡಿ ಅವಳಿಗೆ ತಮಾಷೆಯೆನಿಸಿತು. 'ಈ ಅಡಾವುಡಿಗೆ ಸಲ್ಪನೂ ಅರುವಿಲ್ಲ ತುಣ್ಣೆ ನಿಗಿರಿಸ್ಕಂಡ್ ಹಂಗಾ ಬಿದ್ದೇತಿ ಅಸಿಗೇಡಿ ಊರ್ ಅಸಿಗೇಡಿ' ಎಂದು ಮನಸಲ್ಲೇ ಬೈದುಕೊಂಡು ಮೂಲೆಯಲ್ಲಿ ಬಿದ್ದಿದ್ದ ಅವನ ಲುಂಗಿ ತೆಗೆದುಕೊಂಡು ಅವನ ಚಿನ್ನಿಕೋಲಿಗೆ ಹೊದೆಸಲು ಹೋದಳು. ಆದರೆ ಅದಕ್ಕೇ ಕಾಯುತ್ತಿದ್ದನೇನೋ ಎಂಬಂತೆ ಬಿದ್ದುಕೊಂಡಿದ್ದ ಅವನು ಸರಕ್ಕನೆ ಅವಳನ್ನು ಎಳೆದುಕೊಂಡು ನೆಲಕ್ಕೆ ಬೀಳಿಸಿ ಸೀರೆ ಎತ್ತತೊಡಗಿದ. ಅವಳು 'ಬುಡು ಬುಡು' 'ಜಗ್ಗಿ ದಗದ ಅದಾವ' 'ಇಟತ್ ನ್ಯಾಗ್ ಏನ್ ನಿಂದು?' 'ಯಾರರೆ ಬಂದ್ರ ತಿಪ್ಲ' ಅಂತೆಲ್ಲಾ ಎಷ್ಟು ಗೋಗರೆದರೂ ಕೇಳದೆ ಅವಳನ್ನು ಮತ್ತೆ ಅಂಗಾತ ಬೀಳಿಸಿ ಹಣಿದು ಹಿಪ್ಪೆ ಮಾಡಿ ಪಕ್ಕಕ್ಕೆ ನೂಕಿ ಮತ್ತೆ ಮಲಗಿಕೊಂಡ. ಅವಳಿಗೆ ಸಾಕು ಸಾಕಾಯಿತು. ಮೇಲಕ್ಕೇಳಲಿಕ್ಕಾಗದಷ್ಟು ನಿಶ್ಶಕ್ತಿ. ನರಳುತ್ತ ಕಣ್ಣುಮುಚ್ಚಿದಳು. ಅವನು ಅವಳ ಕುಂಡಿಗೊಮ್ಮೆ ಒದ್ದು, 'ಎದ್ ಚಾ ಮಾಡೋಗ್' ಎಂದ. ಆದರೆ ಅವಳಿಗೆ ಇನ್ನಷ್ಟು ಹೊತ್ತು ಮಲಗಬೇಕೆನಿಸಿತು. ಹಾಗೇ ನರಳುತ್ತ ಹಾಸಿಗೆಯಲ್ಲಿ ಉಳಿದಳು. ಅವನು ಮತ್ತೊಮ್ಮೆ ಬಲವಾಗಿ ಒದ್ದ. ಅವಳು ಎದ್ದು ಸೀರೆ ಸರಿಮಾಡಿಕೊಂಡು ಹೊರಗೆ ಬಂದು ತಟ್ಟಿಯ ಬಚ್ಚಲು ಹೊಕ್ಕಳು. ಮುಖ ತೊಳೆದುಕೊಂಡು ಒಲೆಗೆ ಬೆಂಕಿ ಮಾಡಲು ಹೋಗಬೇಕೆನ್ನುವಷ್ಟರಲ್ಲಿ ತಾನು ಇವತ್ತು ತಮ್ಮೆಂಡಿಗೆ ಹೋದಾಗ ಗೌರಿಗುಂಗಲ್ಲಿ ಮುಳ್ಳುಕಟ್ಟಿಗೆ ಆರಿಸಿಕೊಂಡು ಬರುವುದನ್ನ ಮರೆತಿರೋದು ನೆನಪಾಗಿ ಗಾಬರಿಯಾಯಿತು. 'ಸತ್ಯಪೋ ನಾ' ಎಂದುಕೊಂಡಳು. ಈಗೇನಾದರು ಈ ವಿಷಯ ಕೆಂಚನಿಗೆ ಗೊತ್ತಾದರೆ ಉರುಳಾಡಿಸಿ ಒದೆಯುತ್ತಾನೆ. ಈಗತಾನೆ ತೊಳೆದುಕೊಂಡಿದ್ದ ಅವಳ ಮುಖ ಬೆವರೊಡೆಯತೊಡಗಿತು. ಮೆಲ್ಲಗೆ ಮನೆಹೊಕ್ಕು ಅವನ ಕಡೆ ಒಮ್ಮೆ ನೋಡಿದಳು. ಅವನು ಲುಂಗಿ ಮುಖಕ್ಕೆ ಹಾಕಿಕೊಂಡು ಗೊರಕೆ ಹೊಡೆಯುತ್ತಿದ್ದ. ಬೇಸಾಯಿತೆಂದುಕೊಂಡಳು. ಆದರೆ ಈಗ ಮತ್ತೆ 'ಊರಿಂದ'ಕ್ಕೆ ಹೋಗಿ ಕಟ್ಟಿಗೆ ಆರಿಸಿಕೊಂಡು ಬರುವಷ್ಟರಲ್ಲಿ ಹೊತ್ತಾಗುತ್ತೆ, ಅದರ ಬದಲು ಮನೆಮುಂದೆ ಕೆಂಚ ಎಂದೋ ತಂದು ಹಾಕಿರುವ ಕ್ವಾಲ್ದಿನಿಂದಲೇ ಒಂದಷ್ಟು ಚಕ್ಕೆ ಬಡಬಡ ಹಾರಿಸಿಕೊಂಡರಾಯಿತು ಎಂದುಕೊಂಡು ಅಲ್ಲೇ ಗೋಡೆಗೆ ಆನಿಸಿಟ್ಟಿದ್ದ ಕೊಡಲಿ ತೆಗೆದುಕೊಂಡು ಮೆಲ್ಲಗೆ ಸದ್ದಿಲ್ಲದಂತೆ ಇನ್ನೇನು ಹೊಸಿಲು ದಾಟಬೇಕು ಎನ್ನುವಷ್ಟರಲ್ಲಿ ಚಪ್ಪಲಿಯೊಂದು ರಭಸವಾಗಿ ಬಂದು ಅವಳ ಮುಖಕ್ಕೆ ಬಡಿಯಿತು. 'ಯವ್ವೋ' ಎಂದು

